# 12

# ಇದನ್ನು ಮಾಡುವದರಿಂದ ನೀನು ಎಡವಿ ಬೀಳುವದಿಲ್ಲ (2 ಪೇತ್ರ 1:3-21)

ಈ ದಿನ ನಾವು ಯಾವುದೇ ಕಡೆಗೆ ನೋಡಿದರೂ, ನಮಗೆ ಬಿಳಿಯಾದ ಹಲ್ಲುಗಳು ಇರಬೇಕು, ಮತ್ತು ದೊಡ್ಡ ವಾಹನಗಳು ಬೇಕು ಎಂಬ ಸಂದೇಶವನ್ನು ಕಿವಿಗಡಚಿಕ್ಕುವಂತೆ ಕೇಳಿಸಿ ಕೊಳ್ಳುತ್ತಿದ್ದೇವೆ, ನಮಗೆ ಉತ್ತಮವಾದ ವಸ್ತ್ರಗಳು ಬೇಕು ಅಥವಾ ನವೀನ ಮಾದರಿಯ ಸಲಕರಣೆಗಳು ಬೇಕು. ಗ್ರಾಹಕರ ಅವಶ್ಯಗಳನ್ನು ನೀಗಿಸಿದರೆ ಮಾತ್ರ, ಅವರ ಸರಕುಗಳು ಮಾರಾಟವಾಗುತ್ತವೆ ಎಂದು ವ್ಯವಹಾರಸ್ಥರಿಗೆ ತಿಳಿದಿರುತ್ತದೆ.

ಅದೇ ರೀತಿಯಲ್ಲಿ ಸುಳ್ಳು ಬೋಧಕರುಗಳು, ಕ್ರೈಸ್ತರು ಕೆಲವು ವಿಧವಾದ ಆತ್ಮೀಕ ಆಶೀರ್ವಾದಗಳನ್ನು ಪಡೆದಿರುವದಿಲ್ಲವೆಂದು ಪ್ರಭಾವವನ್ನು ಬೀರುತ್ತಾರೆ. ಪೇತ್ರನು ಬರೆದ ಎರಡನೇಯ ಪತ್ರಿಕೆಯ ಸಮಯದಲ್ಲಿ ಕೆಲವು ಬೋಧಕರುಗಳು, ತಾವು ನೂತನವಾದ ಪ್ರಕಟನೆಗಳನ್ನು ಹೊಂದಿದ್ದೇವೆಂದು ತಿಳಿಸಿದ್ದರು.

## ದೈವೀಕ ಸ್ವಭಾವಕ್ಕೆ ಪಾಲುಗಾರರಾಗಿರಿ (1:3-7)

ಪೇತ್ರನ ಓದಗರು ಅವರಿಗೆ ಅವಶ್ಯವಿದದ್ದನೆಲ್ಲ ಪಡೆದಿದ್ದರು ಎಂದು ಅವರಿಗೆ ಮನವರಿಕೆ ಮಾಡಿದ್ದನು "ಯೇಸುವಿನ ದಿವ್ಯ ಶಕ್ತಿಯು ನಮಗೆ ಪರಿಜ್ಞಾನವನ್ನು ನೀಡಿರುತ್ತದೆ" (1:3). ಪೇತ್ರನ ಹಾಗೂ ಅವನ ಹಾಗೆ ಇದ್ದ ಇತರರ ಸಂದೇಶದ ಮೂಲಕ, ಆಸ್ಯ ಸೀಮೆಯ ಕ್ರೈಸ್ತರು ಕ್ರಿಸ್ತನ ಪೂರ್ಣ ಆಶೀರ್ವಾದಕ್ಕೆ ಬಾಧ್ಯರಾಗಿದ್ದರು.

ಅವರ ಮೂಲಸಂದೇಶವನ್ನು, ಮೂಲ ಸಂದೇಶಕರಿಂದ ಕೇಳುವದರ ಮೂಲಕ, ಪೇತ್ರನು ಬೋಧಿಸಿದ ಕ್ರೈಸ್ತರು ಹೊಸದಾಗಿ ಹುಟ್ಟಿದವರಾಗಿ, ದೇವರ ಆತ್ಮೀಕ ಜೀವಿತದಲ್ಲಿ ಒಂದಾಗಿದ್ದರು. ಅವರು ಸ್ವೀಕರಿಸಿದ ವಾಕ್ಯವು ಅವರು ಪಾಪವನ್ನು ಎದುರಿಸುವಂತೆ ಮಾಡಿ ಅವರನ್ನು ರಕ್ಷಣೆ ಹೊಂದಿದ ಹಾಗೂ ಪರಿಶುದ್ಧ ಜನರನ್ನಾಗಿ ಮಾಡಿತ್ತು. ಇತರೆ ಬೋಧಕರು ದೇವರ ಬಳಿ ಹೋಗಲು ನೂತನ ಮಾರ್ಗವನ್ನಾಗಲೀ ಅಥವಾ ಹೆಚ್ಚಿನ ಮೌಲ್ಯದ ನೈತಿಕತೆಯನ್ನು ನೀಡಲು ಸಾಧ್ಯವಾಯಿತೆ? ಪೇತ್ರನು ದೇವರಿಂದ ಪಡೆದ ಸಂದೇಶವು ಪೂರ್ಣ ಪ್ರಕಟನೆಯಾಗಿದ್ದು ಅದನ್ನೇ ಅವರು ಕೇಳಿರುವದರಿಂದ, ಅವರಿಗೆ ಯಾವ ಕೊರತೆಯು ಇರಲಿಲ್ಲ.

ಪೇತ್ರನ ಓದುಗರು ವಾಗ್ದಾನಗಳನ್ನು ಸ್ವೀಕರಿಸಿದ್ದರು ಮತ್ತು ಆ ವಾಗ್ದಾನಗಳಿಗೆ ಬಾದ್ಯರಾಗಿದ್ದರು - ಪೌಲನ ಮಾತುಗಳಲ್ಲಿ "... ದೇವರು ನಮ್ಮ ಪಿತೃಗಳಿಗೆ ಮಾಡಿದ ವಾಗ್ದಾನವನ್ನು ನಮ್ಮ ಮಕ್ಕಳಿಗೋಸ್ಕರ ನೆರವೇರಿಸಿದ್ದಾನೆಂಬ ಶುಭಸಮಾಚಾರವನ್ನು ನಾವು ನಿಮಗೆ ಸಾರುವವರಾಗಿದ್ದೇವೆ, ಆತನು ಯೇಸುವನ್ನು ಎಬ್ಬಿಸಿದ್ದರಲ್ಲಿ, ..." (ಅಪೊಸ್ತಲರಕೃತ್ಯಗಳು 13:32, 33). ನೂತನವಾದ ಬೋಧಕರುಗಳು ಬರುವ ಮೊದಲು, ಪೇತ್ರನ ಓದುಗರು, ಕ್ರಿಸ್ತನ ರಕ್ತದ ಮೂಲಕ ಉಂಟಾಗುವ ಪಾಪದ ಕ್ಷಮಾಪಣೆಯ ಕಾರ್ಯವನ್ನು ಅನುಭವಿಸಿದ್ದರು. ಕರ್ತನ ದಿವಸದಲ್ಲಿ ಸಂಪೂರ್ಣ ರಕ್ಷಿಸಲ್ಪಡುವರು ಎಂಬ ವಾಗ್ದಾನವನ್ನು ಸಹ ಹೊಂದಿದ್ದರು. ಪೇತ್ರನ ಓದುಗರು ಈಗಾಗಲೇ ಆನಂದ ಪಟ್ಟಿದ್ದ ವಾಗ್ದಾನಗಳಿಗಿಂತ, ಸುಳ್ಳು ಬೋಧಕರ ವಾಗ್ದಾನಗಳು ಮಹತ್ವದ್ದಾಗಿರಲಿಲ್ಲ.

ಕ್ರೈಸ್ತರು ದೇವರೊಂದಿಗೆ ಆತ್ಮೀಕವಾಗಿ ಒಂದಾಗಿದ್ದರು. ಪೌಲನು ಹೀಗೆ ಹೇಳಿದನು, "ಹೀಗಿರಲಾಗಿ ನಾವು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗುವದಕ್ಕೆ ಆತನೊಂದಿಗೆ ಹೂಣಲ್ಪಟ್ಟೆವು ಆದದರಿಂದ ಕ್ರಿಸ್ತನು ಸತ್ತು ತಂದೆಯ ಮಹಿಮೆಯಿಂದ ಜೀವಿತನಾಗಿ ಎಬ್ಬಿಸಲ್ಪಟ್ಟಂತೆಯೇ ನಾವು ಕೂಡ ಜೀವದಿಂದೆದ್ದು ಹೊಸಬರಾಗಿ ನಡಕೊಳ್ಳಬೇಕು" (ರೋಮಾಪುರ 6:4). ದೇವರ ಕೃಪೆಯು ನಮ್ಮನ್ನು ದೇವರ ಸ್ವಭಾವಕ್ಕೆ ಪಾಲುಗಾರರನ್ನಾಗಿಸುತ್ತದೆ; ಕ್ರಿಸ್ತನು ಕ್ರೈಸ್ತರ ಪಾಪವನ್ನು ಕ್ಷಮಿಸಿರುವದರಿಂದ ಅವರು ನಿರ್ಮಲರು ಮತ್ತು ಪರಿಶುದ್ಧರು ಆಗಿದ್ದಾರೆ. ಈ ಮೂಲಕ ಲೋಕದ ಆಶಾಪಾಶಗಳಿಂದ ಅವರು ತಪ್ಪಿಸಿಕೊಳ್ಳುತ್ತಾರೆ? ಈ ರೀತಿಯಾದ ದೈವೀಕ ವಿಷಯಗಳಲ್ಲಿ ಪಾಲುಗಾರರಾಗುವಂಥ ವಿಷಯವನ್ನು ಸುಳ್ಳುಬೋಧಕರನ್ನು, ಅಥವಾ ನೂತನ ಪ್ರಕಟನೆಯನ್ನು, ಯೇಸುವಿನ ಬರೋಣದ ಕುರಿತಾಗಿ ಅಥವಾ ದೇವರ ವಾಕ್ಯದ ನೂತನವಾದ ವಿವರಣೆಯನ್ನು ನೀಡುವೆನು ಎಂದು ಬರುವ ಬೋಧಕರ ವಿಷಯದಲ್ಲಿ, ಕೇಳುಗರು ಪರಿಗ್ರಹಿಸುವ ತಿಳುವಳಿಕೆಯನ್ನು ಹೊಂದಿರಬೇಕು, ಸ್ವಲ್ಪ ಯೋಚಿಸಿ, "ನಾನು ಈಗಾಗಲೇ ಕೇಳಿರುವ ಸುವಾರ್ತೆಯು ತಪ್ಪಾಗಿರುವುದೇ? ಆ ವಾಗ್ದಾನಗಳು ಸಾಕಾಗುವದಿಲ್ಲವೇ?" ಎಂದು ಪ್ರಶ್ನಿಸಬೇಕು ಮುಂದಿನ ವಚನದಲ್ಲಿ ಪೇತ್ರನು ಸ್ಪಷ್ಟಮಾಡಿದ್ದಾನೆ. ಈ ಕಾರಣದಿಂದ ಕ್ರೈಸ್ತರು ದೈವೀಕ ಗುಣಗಳನ್ನು ಹೊಂದಿದವರಾಗಿ, ದೇವರ ಸಕಲ ವಾಗ್ದಾನಕ್ಕೆ ಬಾಧ್ಯರಾಗಿರಬೇಕು. ದೈವೀಕವಾದ ಸದ್ಗುಣಗಳ ಮಾರ್ಗವನ್ನು 1:5-7ರಲ್ಲಿ ವಿವರಿಸಲಾಗಿದೆ, ಈ ಪತ್ರಿಕೆಯಲ್ಲಿರುವ ಪ್ರಾಮುಖ್ಯವಾದ ವಾಕ್ಯಗಳಾಗಿವೆ.

ಕ್ರೈಸ್ತ ಪ್ರಯಾಣವು ವಿಶ್ವಾಸ ಎಂಬ ಅಂಶದಿಂದ ಪ್ರಾರಂಭವಾಗುತ್ತದೆ. ಆದರೆ ಯಾಕೋಬನ ಮಾತುಗಳಲ್ಲಿ, "... ನಂಬಿಕೆ ಇಲ್ಲದ ಕ್ರಿಯೆಯು ಸತ್ತದ್ದೆ" (ಯಾಕೋಬ 2:26). ಆದುದರಿಂದ ಪೇತ್ರನು, "ನಿಮ್ಮ ನಂಬಿಕೆಗೆ ಸದ್ಗುಣವನ್ನು ಸೇರಿಸಿರಿ" ಎಂದು ಹೇಳಿದನು (1:5). NIV ಕ್ರೈಸ್ತರು ನಂಬಿಕೆಗೆ ನೈತಿಕ ನೀತಿಯನ್ನು ಮತ್ತು ವೈಯಕ್ತಿಕವಾದ ಸದ್ಗುಣವನ್ನು ಸೇರಿಸಬೇಕು. ಸದ್ಗುಣಕ್ಕೆ "ಜ್ಞಾನವನ್ನೂ" (1:5) ಅಂದರೆ, ಈ ಹಿನ್ನೆಲೆಯಲ್ಲಿ "ದೇವರ ವಿವೇಕವನ್ನು, ಸೇರಿಸಬೇಕು." ಪೌಲನು ಇದನ್ನು 1 ಕೊರಿಂಥ 2:7ರಲ್ಲಿ ತಿಳಿಸಿದ್ದಾನೆ. ಇದು ದೇವರ ಸತ್ಯದ ಜ್ಞಾನ ಮತ್ತು ಈ ದೇವರ ಜ್ಞಾನವನ್ನು, ಆತನ ಮಹಿಮೆಗಾಗಿ ಉಪಯೋಗಿಸಬೇಕು. ಜ್ಞಾನಕ್ಕೆ "ದಮೆಯನ್ನು" ಸೇರಿಸಬೇಕು (1:6), "ಮಿತಾಚಾರ" ಎಂಬ ಪದಕ್ಕಿಂತಲೂ ಉತ್ತಮವಾದದ್ದು KJVಯಲ್ಲಿ ಆತ್ಮನ ಫಲ ದಮೆ ಎಂದು ಪೌಲನು ತಿಳಿಸಿದ್ದಾನೆ (ಗಲಾತ್ಯ 5:23). ಸೊಲೊಮೋನನ ಜ್ಞಾನೋಕ್ತಿಗಳಲ್ಲಿ, "ಆತ್ಮವನ್ನು ಸ್ವಾದೀನ ಮಾಡಿಕೊಳ್ಳದವನು ಗೋಡೆಬಿದ್ದ ಹಾಳೂರಿಗೆ ಸಮಾನ" (ಜ್ಞಾನೋಕ್ತಿ 25:28).

ದಮೆಗೆ, "ಅವಿರತ ಯತ್ನವನ್ನು" ಸೇರಿಸಬೇಕು (1:6) KJVಯಲ್ಲಿ "ತಾಳ್ಮೆ" ಎಂಬುದಾಗಿದೆ, ಒಪ್ಪಿಗೆಯ ಅಂಶವನ್ನು ದೃಢಪಡಿಸುವ ಪದ ಗ್ರೀಕ್ ಭಾಷೆಯಲ್ಲಿ ಇದನ್ನು ತೊಂದರೆಗಳ ನಡುವೆ ಎಡಬಿಡದೆ ಸಹಿಸುವಿಕೆ ಎಂಬುದಾಗಿ (1:6). ನಮ್ಮ ಜೀವಿತವು ದೇವರೊಂದಿಗೆ ಐಕ್ಯತೆಯಲ್ಲಿದ್ದರೆ, ನಾವು ದೈವಭಕ್ತಿಯಿಂದ ಕಾರ್ಯನಡಿಸು ತ್ತೇವೆ, ನಾವು ಆತನ ಮೆಚ್ಚುಗೆಗಾಗಿ ಮತ್ತು ಆತನನ್ನು ಸನ್ಮಾನಿಸುವದಕ್ಕಾಗಿ ಎಲ್ಲವನ್ನು ಮಾಡುತ್ತೇವೆ.

ಭಕ್ತಿಗೆ, "ಸಹೋದರ ಸ್ನೇಹವನ್ನು" ಸೇರಿಸಿರಿ (1:7). 1 ಪೇತ್ರ 1:22ರಲ್ಲಿ, ಇದೇ ಗ್ರೀಕ್ ಪದವನ್ನು ಉಪಯೋಗಿಸಲಾಗಿದೆ. 1 ಪೇತ್ರ 3:8 ರಲ್ಲಿಯೂ ಸಮಾನ ಪದವನ್ನು ಉಪಯೋಗಿಸಲಾಗಿದೆ. ಸಾಮಾನ್ಯ ಪ್ರಪಂಚದಲ್ಲಿ ಸ್ವಂತ ಸಹೋದರನಿಗೆ ಪ್ರೀತಿ ಎಂಬುದಾಗಿದೆ. ಹೊಸ ಒಡಂಬಡಿಕೆಯಲ್ಲಿ ಕ್ರಿಸ್ತನಲ್ಲಿರುವ ಸಹೋದರರ ಪ್ರೀತಿ ಎಂಬುದಾಗಿ.

ಸಹೋದರ ಸ್ನೇಹಕ್ಕೆ ಪೇತ್ರನು ಹೇಳಿದ್ದು, "ಪ್ರೀತಿಯನ್ನು" ಕೂಡಿಸಿರಿ (1:7). ಪೌಲನ ಹಾಗೆ (1 ಕೊರಿಂಥ 13:13), ಸದ್ಗುಣದ ಶೀಲವಂತನನ್ನು ಕಡೆಯವರೆಗೂ ಕಾಪಾಡಿದವನು ಇದನ್ನು ವ್ಯಾಖ್ಯಾನ ಮಾಡಲು ಅಸಾಧ್ಯ.

## ನಿನ್ನ ಆಯ್ಕೆಯನ್ನು ಮತ್ತು ಕರೆಯನ್ನು ದೃಢಪಡಿಸಿಕೋ (1:8-15)

ಪೇತ್ರನು ತನ್ನ ಉದ್ದೇಶದಿಂದ ದೂರ ಹೋಗಲಿಲ್ಲ, ಅವರು ಜ್ಞಾನದಲ್ಲಿ ಬೆಳೆದು, ಸುಳ್ಳು ಬೋಧಕರನ್ನು ಪರಿಣಾಮಕಾರಿಯಾಗಿ ಎದುರಿಸಬೇಕಿತ್ತು. ಅವನು, "ಇವು ನಿಮ್ಮಲ್ಲಿದ್ದು ಹೆಚುತ್ತಾ ಬಂದರೆ ನಮ್ಮ ಕರ್ತನಾದ ಯೇಸು ಕ್ರಿಸ್ತನ ಸಂಬಂಧವಾದ ಪರಿಜ್ಞಾನವನ್ನು ಹೊಂದುವ ವಿಷಯದಲ್ಲಿ ನಿಮ್ಮನ್ನು ಆಲಸ್ಯಗಾರರೂ ನಿಷ್ಫಲರೂ ಆಗದಂತೆ ಮಾಡುತ್ತವೆ" (1:8). ಒಬ್ಬ ಕ್ರೈಸ್ತನು ಇಲ್ಲಿ ಕಾಣಿಸಿರುವ ಸದ್ಗುಣಗಳನ್ನು ತನ್ನ ಜೀವಿತಕ್ಕೆ ಸರಭರಾಜು ಮಾಡಿದರೆ 1:5-7, ಮತ್ತು ಅವುಗಳನ್ನು ಆಚರಣೆ ಮಾಡಿದರೆ, ಕ್ರಿಸ್ತನ ಜ್ಞಾನವು ಅವನಲ್ಲಿ ಸ್ವಾಭಾವಿಕವಾದ ಪ್ರತಿಫಲವಾಗುತ್ತದೆ. ಪೇತ್ರನು ಅಭಿಪ್ರಾಯದ ಕಲ್ಪನೆಯನ್ನು ಹೊರತುಪಡಿಸಿ, ಪ್ರಾಯೋಗಿಕ ವಾದ ಜ್ಞಾನದ ಕುರಿತು ಹೇಳುತ್ತಿದ್ದಾನೆ. ಈ ಎರಡೂ ಸಂಗತಿಗಳು ಸಮಾನಾಗಿರುವದಿಲ್ಲ. ಅಂಗ ಸಾಧನೆಯ ಬಗ್ಗೆ ಒಬ್ಬನು ಓದಿರಬಹುದು, ಉದಾಹರಣೆಗೆ, ಅಂಗ ಸಾಧನೆಯನ್ನು ಅವನು ಪ್ರಾಯೋಗಿಕವಾಗಿ ಅಭ್ಯಾಸ ಮಾಡಿದ್ದರೆ ಮಾತ್ರ ಅಂಗ ಸಾಧನೆ ಏನು, ಎಂದು ಅವನಿಗೆ ತಿಳಿದಿರುತ್ತದೆ.

ಆತ್ಮೀಕ ಆಲೋಚನೆಯೂ ಇದೇ ರೀತಿಯಲ್ಲಿರುತ್ತದೆ. ಒಬ್ಬನು ಎಡೆಬಿಡದ ಯತ್ನದ ವಿಷಯವಾಗಿ ಓದಿರಬಹುದು, ಅವನು ಅದನ್ನು ಹಿಂಬಾಲಿಸಿದ್ದರೆ ಮಾತ್ರ ಅದರ ಕಾರ್ಯ ವೈಕರಿ ಏನು ಎಂದು ತಿಳಿಯುತ್ತಾನೆ, ದಮೆಯನ್ನು ಅಭ್ಯಾಸ ಮಾಡಿದ್ದರೆ ದಮೆಯ ಕುರಿತಾಗಿ ತಿಳಿದಿರುತ್ತಾನೆ, ಶಮೆ-ದಮೆಯನ್ನು, ಎಡಬಿಡದ ಯತ್ನವನ್ನು ಮತ್ತು ಇತರ ಕೃಪಾಕಾರ್ಯಗಳ ಮುಖಾಂತರ ಕ್ರಿಸ್ತನನ್ನು ಅರಿಯಬಹುದು. ಅಭ್ಯಾಸವು ತಿಳುವಳಿಕೆಯನ್ನು ಹೆರುತ್ತದೆ. ಇವುಗಳು ನಮ್ಮಲ್ಲಿ ಸಮೃದ್ಧಿಯಾಗಿದ್ದರೆ, ನಾವು ಪರಿಣಾಮಕಾರಿಗಳಾಗಿ ಮತ್ತು ಪ್ರತಿಫಲವನ್ನು ನೀಡುವವರಾಗಿ ಕ್ರಿಸ್ತನ ತಿಳುವಳಿಕೆಯಲ್ಲಿ ಬೆಳೆಯುತ್ತೇವೆ. ಒಬ್ಬನು ಈ ಪ್ರಾಯೋಗಿಕವಾದ ವಿಷಯಗಳನ್ನು ಮಾಡುವಲ್ಲಿ ಸೋತವನಾಗಿ, ನಾನು ಇನ್ನೂ ಕ್ರಿಸ್ತನನ್ನು ಅರಿತಿದ್ದೇನೆ ಎಂದು ಹೇಳುವವನು ತಾನು ಕುರುಡನಾಗಿದ್ದಾನೆ ಎಂಬುದನ್ನು ಮರೆತ್ತಿದ್ದಾನೆ (ಅವನು ತಿಳಿದಿರುವದಿಲ್ಲ) ಮತ್ತು ಅವನು ತನ್ನ ಹಳೆ ಪಾಪದಿಂದ ತೊಳೆಯಲ್ಪಟ್ಟನಾಗಿದ್ದಾನೆ ಎಂಬುದನ್ನು ಸಹ ಮರೆತಿರುವನು (1:9).

ದೇವರು ತನ್ನ ಹೆಸರಿಗಾಗಿ ಒಂದು ಜನಾಂಗವನ್ನು ಆರಿಸಿಕೊಂಡನು, ಇದು ಹಳೆ ಒಡಂಬಡಿಕೆಯಲ್ಲಿರುವ ಆಳವಾದ ಸಿದ್ಧಾಂತವಾಗಿರುತ್ತದೆ. ಮೋಶೆಯು ದೇವರಾದುಕೊಂಡ ಜನರಿಗೆ ಧರ್ಮಶಾಸ್ತ್ರವನ್ನು ನೀಡಿದ ನಂತರ, ಅವರಲ್ಲಿ ಜನಿಸಿದ ವ್ಯಕ್ತಿಗಳು, ಆರಿಸಲ್ಪಟ್ಟವರ ಗುಂಪಿಗೆ ಸೇರಿಕೊಳ್ಳುತ್ತಿದ್ದರು. ಯೇಸು ಕ್ರಿಸ್ತನು ಹೊಸ ಒಡಂಬಡಿಕೆಯನ್ನು ಸ್ಥಾಪಿಸಿದ್ದರಿಂದ, ನಾವುಗಳು ಸಹ ನಂಬಿಕೆಯಿಂದ, ಆತನು ಆದುಕೊಂಡವರ ಗುಂಪಿಗೆ ಸೇರಿಕೊಳ್ಳುತ್ತೇವೆ. ಪೇತ್ರನ ಓದುಗರು ಅವರ ಅಜ್ಞಾನದ ನಿಮಿತ್ತವಾಗಿ ಆಯ್ಕೆಯಾದವರ ಗುಂಪಿನಿಂದ ಕೈಬಿಡಲ್ಪಡುವ ಸಾಧ್ಯತೆಯಿತ್ತು (1:10). "ಒಂದು ಸಾರಿ ರಕ್ಷಣೆಯಾದರೆ, ನೀವು ತಿರುಗಿ ನಾಶವಾಗುವದಿಲ್ಲ" ಎಂಬ ಸಿದ್ಧಾಂತವನ್ನು ವಾಕ್ಯದಲ್ಲಿ ಕಾಣುವದಿಲ್ಲ. ದೇವರು ಧಾರಳವಾಗಿ ಅನುಗ್ರಹಿಸುವನು (1:10, 11). ಪೇತ್ರನು ಯಾವುದೇ ಹೊಸ ತತ್ವವನ್ನು ಬೋಧಿಸುತ್ತಿರುವದಿಲ್ಲ ಎಂದು ಸ್ಪಷ್ಟಪಡಿಸಿದನು. ಅವರು ಈಗಾಗಲೇ ತಿಳಿದಿರುವ ವಿಷಯವು ಸತ್ಯವಾಗಿತ್ತು ಎಂದು ಪೇತ್ರನು ನೆನಪು ಮಾಡುತ್ತಿದ್ದಾನೆ (1:12). ನಾವು ಹೊಸದಾದ್ದನ್ನು ತಿಳಿಯುವದಕ್ಕಿಂತಲೂ, ಈಗಾಗಲೇ ತಿಳಿದಿರುವ ವಿಷಯಗಳನ್ನು ನೆನಪು ಮಾಡಿಕೊಳ್ಳಬೇಕು. ದೃಢವಾಗಿ ಇಲ್ಲದವರು ಮತ್ತು ಪರಿಪಕ್ವತೆಗೆ ಬರದವರು ಯಾವಾಗಲೂ ಹೊಸದನ್ನು ಬಯಸುತ್ತಾರೆ. ಬೈಬಲ್ ನಮ್ಮನ್ನು ಸತ್ಯದ ಮೇಲೆ ಸ್ಥಾಪಿಸುತ್ತದೆ. ಪ್ರತಿ ಬೋಧನೆಯ, ಪ್ರಕಟನೆ ಏನು ಎಂಬುದಾಗಿ ಗಂಭೀರ ವಾಗಿ ಆಲೋಚಿಸತಕ್ಕದ್ದು.

1 ಪೇತ್ರನಂತೆಯೇ, 2 ಪೇತ್ರದಲ್ಲಿಯೂ ಸಹ ಸುವಾರ್ತೆಗಳಲ್ಲಿ ಇರುವಂತ ಸೂಚನೆಗಳನ್ನು ಕಾಣುತ್ತೇವೆ. 2 ಪೇತ್ರ 1:14ರಲ್ಲಿ ಯೇಸು ಅವನೊಂದಿಗೆ ಮಾತಾಡಿದ ಪದಗಳನ್ನು ಪೇತ್ರನು

ತಿಳಿಸಿದ್ದಾನೆ:

> ನಿನಗೆ ನಿಜನಿಜವಾಗಿ ಹೇಳುತ್ತೇನೆ, ನೀನು ಯೌವನಸ್ಥನಾಗಿದ್ದಾಗ ನೀನೇ ನಡುವನ್ನು ಕಟ್ಟಿಕೊಂಡು ಇಷ್ಟಬಂದ ಕಡೆಗೆ ತಿರುಗಾಡುತ್ತಿದ್ದಿ; ಆದರೆ ನೀನು ಮುದುಕನಾದಾಗ ನಿನ್ನ ಕೈಗಳನ್ನು ಚಾಚುವಿ, ಮತ್ತೊಬ್ಬನು ನಿನ್ನ ನಡುವನ್ನು ಕಟ್ಟಿಕೊಂಡು ನಿನಗೆ ಇಷ್ಟವಿಲ್ಲದ ಕಡೆಗೆ ನಿನ್ನನ್ನು ತೆಗೆದುಕೊಂಡು ಹೋಗುವನು ಎಂದು ಹೇಳಿದನು. ಅವನು ಎಂಥಾ ಸಾವಿನಿಂದ ದೇವರನ್ನು ಮಹಿಮೆಪಡಿಸುವನು ಎಂಬದನ್ನು ಆತನು ಈ ಮಾತಿನಿಂದ ಸೂಚಿಸಿದನು. ಇದನ್ನು ಹೇಳಿ ಆತನು ಅವನಿಗೆ-ನನ್ನನ್ನು ಹಿಂಬಾಲಿಸು ಎಂದು ಹೇಳಿದನು (ಯೋಹಾನ 21:18, 19).

ದೇವರ ಈ ಪ್ರವಾದನೆಯು ನೆರವೇರುವಂತ ಸಮಯವು ಹತ್ತಿರವಾಯಿತು ಎಂದು ಪೇತ್ರನಿಗೆ ತಿಳಿದು ಬಂದಿತ್ತು (1 :14).

ಕಳೆದು ಹೋದ ಘಟನೆಯ ಕುರಿತು ಮಾತನಾಡದೆ 1:15 ಅವನ ಭವಿಷ್ಯದ ಯೋಜನೆಯ ಕುರಿತಾಗಿರುತ್ತದೆ. ಅವನು, "ಯಾಕಂದರೆ ನೀವು ನನ್ನ ಮರಣಾಂತರದಲ್ಲಿ ಇವುಗಳನ್ನು ಯಾವಾಗಲೂ ಜ್ಞಾಪಕಮಾಡಿಕೊಳ್ಳುವುದು ಸಾಧ್ಯವಾಗುವಂತೆ ಪ್ರಯಾಸಪಡುವೆನು." ಅವನ ಮರಣದ ನಂತರ "ಈ ಸಂಗತಿಗಳನ್ನು" ಅವರು ನೆನಪುಮಾಡಬೇಕಿತ್ತು. ಅವುಗಳನ್ನು ಯೇಸು ಅವನಿಗೆ ತಿಳಿಯಪಡಿಸಿದ್ದು. ಒಂದು ವೇಳೆ ಅದು 1:15 ಅವನು ಕ್ರಿಸ್ತನಲ್ಲಿ ಜೀವಿಸಿದ ಜೀವಿತದ ದಾಖಲೆಯನ್ನು ನಮೂದಿಸಿದ್ದನು. ಪೇತ್ರನ ಸುವಾರ್ತೆ ಎಂಬುದಾಗಿ ಇರುವದಿಲ್ಲ. ಆದರೆ ಆದಿ ಸಭೆಯ ಪೇತ್ರನ ಕುರಿತಾದ ಅಧಿಕಾರದ ಸಾಕ್ಷಿಯು, ಮಾರ್ಕನ ಸುವಾರ್ತೆಗಿಂತ ಮೊದಲೇ ಪ್ರಾಯೋಜಿಸಲಾಗಿತ್ತು. ಪೇತ್ರನ ವಾಗ್ದಾನದ ಪರಿಣಾಮವನ್ನು ಮಾರ್ಕನ ಸುವಾರ್ತೆಯಲ್ಲಿ ಕಾಣಬಹುದು.

## ಆತನ ಶಕ್ತಿಯ ಹಾಗೂ ಕರ್ತನ ಆಗಮನದ ತಿಳುವಳಿಕೆಯಲ್ಲಿ ಭರವಸವಿಡಿರಿ (1:16-21)

ವಚನ 16 ತಿಳಿಸುತ್ತದೆ, "ನಮ್ಮ ಕರ್ತನಾದ ಯೇಸು ಕ್ರಿಸ್ತನ ಶಕ್ತಿಯನ್ನೂ ಪ್ರತ್ಯಕ್ಷತೆಯನ್ನು ನಿಮಗೆ ತಿಳಿಯಪಡಿಸಿದ್ದರಲ್ಲಿ ಚಮತ್ಕಾರದಿಂದ ಕಲ್ಪಿಸಿದ ಕಥೆಗಳನ್ನು ನಾವು ಅನುಸರಿಸುವವರಾಗಿರಲಿಲ್ಲ. ಆತನ ಮಹತ್ತನ್ನು ಕಣ್ಣಾರೆ ಕಂಡವರಾಗಿಯೇ ತಿಳಿಯಪಡಿಸಿದೆವು." ಪೇತ್ರನ ಬೋಧನೆಗೂ ಮತ್ತು ಸುಳ್ಳು ಬೋಧನೆಗೂ ನಡುವೆ ಇರುವ ಅಧಿಕಾರದ ವ್ಯತ್ಯಾಸವನ್ನು ಸ್ಪಷ್ಟಪಡಿಸಿದನು. ಸುಳ್ಳು ಬೋಧಕರುಗಳು ಅಧಿಕಾರವಿಲ್ಲದವರಾಗಿದ್ದರು. ಅವರು ಬೋಧನೆಗಳು "ಚಮತ್ಕಾರದ ಕಲ್ಪನಾ ಕಥೆಗಳಾಗಿದ್ದವು" 1:1-21ರಲ್ಲಿ, ಆ ಕಥೆಗಳ ಬದಲಾಗಿ, ಅಪೋಸ್ತಲರ ಬೋಧನೆಗಳಿಗೆ ಮನ್ನಣೆ ನೀಡಲು ಎರಡು ಪ್ರಾಮುಖ್ಯವಾದ ಕಾರಣಗಳನ್ನು ಪೇತ್ರನು ನೀಡಿದನು.

ಮೊದಲನೆಯದಾಗಿ, ಪೇತ್ರನು ಕಣ್ಣಾರೆ ಕಂಡವನಾಗಿದ್ದನು. 1 ಪೇತ್ರ 5:1 ಮತ್ತು 2 ಪೇತ್ರ 1:16 ಈ ಎರಡು ವಚನಗಳಲ್ಲೂ, ಅವನು ಕ್ರಿಸ್ತನನ್ನು ಕಣ್ಣಾರೆ ಕಂಡಿದ್ದರಿಂದ, ಅವನ ಅಧಿಕಾರವು ಅಧಿಕೃತವಾದದ್ದು ಎಂದು ತಿಳಿಸಿದನು. 1 ಪೇತ್ರನಲ್ಲಿ ನಿರ್ದಿಷ್ಟವಾದ ಯಾವದೇ ಘಟನೆಗಳನ್ನು ತಿಳಿಸಲಿಲ್ಲ, ಆದರೆ 2 ಪೇತ್ರನಲ್ಲಿ ಅದನ್ನು ತೋರಿಸಿದನು (1:17, 18). ಇಲ್ಲಿರುವಂಥ ಘಟನೆಯನ್ನು ವೈಯಕ್ತಿಕವಾಗಿ ತಾನು ನೋಡಿದ್ದನ್ನು ಕಾರ್ಯರೂಪದಲ್ಲಿ ತೋರಿಸಿದನು. ರೂಪಾಂತರವಾದ ಪರ್ವತದಲ್ಲಿ, ಕ್ರಿಸ್ತನ ಸಂಗಡ ಪೇತ್ರ, ಯೋಹಾನ ಹಾಗೂ ಯಾಕೋಬ ಈ ಮೂವರು ಇದ್ದರು. ಅಲ್ಲಿ ಮೋಶೆ ಮತ್ತು ಎಲೀಯ ಅವರೊಂದಿಗೆ ಮಾತನಾಡಿದ್ದರು. ಅಲ್ಲಿ ಇನ್ನೂ ವಿಶೇಷವಾದದ್ದು ನಡೆದಿತ್ತು.

ಮಹತ್ವದ ಮಹಿಮೆಯು ಕಾಣಿಸಲ್ಪಟ್ಟು, ಕ್ರಿಸ್ತನ ಕುರಿತಾದ ಸಾಕ್ಷಿಯ ಮತುಗಳನ್ನು ಆಲಿಸಿದದರು: "ಈತನು ಪ್ರಿಯನಾಗಿರುವ ನನ್ನ ಮಗನು, ಈತನನ್ನು ನಾನು ಮೆಚ್ಚಿದ್ದೇನೆ." ಮತ್ತಾಯ 17:1-5, ಮಾರ್ಕ 9:2-7, ಮತ್ತು ಲೂಕ 9:28-35 ಇಲ್ಲಿ ಸಾಕ್ಷಿಯ ಕುರಿತಾದ ಮಾಹಿತಿಗಳಿವೆ. ಈ ಮೂರು ವ್ಯಾಖ್ಯಾನಗಳಲ್ಲಿಯೂ ಒಂದು ವಿಶೇಷವಾದ ದೇವರ ವ್ಯಾಖ್ಯಾನವುಂಟು "ಈತನ ಮಾತನ್ನು ಕೇಳಿರಿ."

ಎರಡು, ಪೇತ್ರನಲ್ಲಿ ಪ್ರವಾದಿಯ ಸಂದೇಶ ಉಂಟು, ಸುಳ್ಳು ಬೋಧಕರು ಗಳು ಕಣ್ಣಿನಿಂದ ನೋಡಿದ ಸಾಕ್ಷಿಯಾನ್ನಾಗಲೀ, ಅಥವಾ ದೇವ ಪ್ರವಾದಿಗಳ ಆಧಾರವನ್ನಾಗಲೀ ಹೊಂದಿರಲಿಲ್ಲ. ಪ್ರವಾದಿಗಳು ತಿಳಿಸಿದ ವಿಷಯಗಳ ಮೇಲೆ ದೃಷ್ಟಿ ಇಡಿರಿ ಎಂದು ತನ್ನ ಓದುಗರಿಗೆ ಸೂಚಿಸಿದನು. 1:20ರಲ್ಲಿರುವ KJVಯ ತರ್ಜುಮೆ ಗೊಂದಲಮಯವಾಗಿದೆ. "ಯಾವುದೇ ಪ್ರವಾದಿಯ, ಪ್ರವಾದನೆಗಳು ವೈಯಕ್ತಿಕ ಅನುವಾದಕ್ಕಾಗಿ ನೀಡಲಾಗಿಲ್ಲ." ಪೇತ್ರನು ನಾವು ಇದನ್ನು ವೈಯಕ್ತಿಕವಾಗಿ ಹೇಳಬಾರದು ಎಂದು ತಿಳಿಸುತ್ತಿಲ್ಲ. ದೇವರು ಹೇಳಿರುವದನ್ನು ನಾವು ಅನುವಾದ ಮಾಡದೆ ಹೋದರೆ, ನಾವು ದೇವರ ಮಾತುಗಳನ್ನು ಅರಿಯುವುದು ಹೇಗೆ? ಪ್ರವಾದನೆಗಳನ್ನು ವೈಯಕ್ತಿಕವಾಗಿ ಅರಿಯುವುದು ವೈಯಕ್ತಿಕವಾದದ್ದೆ ಎಂದು ತಿಳಿಸುತ್ತಾನೆ, ಯಾಕೆಂದರೆ ದೇವರು ತಾನೇ ಪ್ರವಾದಿಗಳನ್ನು ಪ್ರೇರಿಸಿದ್ದಾನೆ. ಆದುದರಿಂದ ಅವರ ಸಂದೇಶವು ಅರ್ಥವನ್ನೂ ಮತ್ತು ಅಧಿಕಾರವನ್ನು ಹೊಂದಿರುತ್ತದೆ. 1:20ರ NIV ತರ್ಜುಮೆಯು ಈ ಅಂಶವನ್ನು ಸ್ಪಷ್ಟವಾಗಿ ತಿಳಿಸುತ್ತದೆ: "... ಯಾಕೆಂದರೆ ಯಾವ ಪ್ರವಾದನೆಯು ಕೇವಲ ಮಾನುಷ್ಯ ಬುದ್ಧಿಯಿಂದ ಬಂದದ್ದಲ್ಲ" ಎಂದು NASB ಹೇಳುತ್ತದೆ. "ಯಾವುದೇ ಪ್ರವಾದನೆಯನ್ನು ಮನುಷ್ಯ ಜ್ಞಾನದಿಂದ ವಿವರಿಸತಕ್ಕದ್ದಲ್ಲ."

## ಮುಕ್ತಾಯ

1 ಪೇತ್ರ 1 ನೇ ಅಧ್ಯಾಯದಲ್ಲಿ ಜ್ಞಾನದ ಕುರಿತು ಒತ್ತಿ ಹೇಳಲಾಗಿದೆ. ಅವರ ಸಂಕಟಗಳ ಬಗ್ಗೆ ಮಾತ್ರ ಅಪೊಸ್ತಲನು ಚಿಂತನೆ ಮಾಡಲಿಲ್ಲ. ಅವರು ಹೊಂದಿದ ಜೀವವನ್ನು ನಿರರ್ಥಕ ಪಡಿಸಲು, ಹೊಸದಾಗಿ ಬಂದ ಸುಳ್ಳು ಬೋಧಕರ ಕುರಿತಾದ ಚಿಂತನೆಯಾಗಿತು. ಅವರು ಹೊಂದಿರುವ ಮಹತ್ವದ ಹಾಗೂ ಅಮೂಲ್ಯವಾದ ವಾಗ್ದಾನದ ಕುರಿತು ಪೇತ್ರನು ನೆನಪು ಮಾಡಿದನು. ಅವರು ಕ್ರೈಸ್ತ ಕೃಪೆಯನ್ನು ಧರಿಸಿದವರಾಗಿ, ಪರಿಜ್ಞಾನವನ್ನು ಹೊಂದಿಕೊಂಡು, ಕ್ರಿಸ್ತನ ಜ್ಞಾನದಲ್ಲಿ ಫಲಭರಿತರಾಗಬೇಕೆಂಬ ಕರೆಯನ್ನು ನೀಡಿದನು.

ಅವನು ಅಪೊಸ್ತಲನಾಗಿದ್ದಲಿಂದ, ಅವನ ಅಧಿಕಾರವು ಅಧಿಕೃತವಾಗಿತ್ತು ಎಂದು ಈ ಕ್ರೈಸ್ತರು ತಿಳಿಯುವಂಥದ್ದು ಬಹು ಪ್ರಾಮುಖ್ಯವಾಗಿತ್ತು. ಅವನು ನೀಡಿದ ಸಾಕ್ಷಿಗೂ ಮತ್ತು ಹೊಸದಾಗಿ ನುಸುಳಿ ಬಂದ ಸುಳ್ಳು ಬೋಧಕರ ಬೋಧನೆಗಳ ನಡುವೆ, ಸರಳ ವಾದಂಥ ವ್ಯತ್ಯಾಸವಿತ್ತು. ಪ್ರವಾದಿಗಳು ಅವನ ಸಂದೇಶಕ್ಕೆ ಆಧಾರವಾಗಿರಬೇಕೆಂದು ಬೇಡಿಕೊಂಡನು.

ನಾವು ಪೇತ್ರನ ಪದಗಳನ್ನು ಅರ್ಥಮಾಡಿಕೊಳ್ಳಬಹುದು. ಸುಳ್ಳು ಬೋಧಕರುಗಳು ಮೊದಲ ಶತಮಾನದಲ್ಲಿ ವಿಶೇಷವಾಗಿರಲಿಲ್ಲ. ಪ್ರತಿ ಜನಾಂಗವು ಸತ್ಯವನ್ನು ಸಂಶೋಧಿಸಿ, ಸಿದ್ಧಾಂತಗಳನ್ನು ಪರಿಶೀಲಿಸಬೇಕು. ದೇವರು ತನ್ನ ವಾಕ್ಯದಲ್ಲಿ ನೀಡಿರುವ ವಿಷಯಗಳನ್ನು ಈಗಿನ ಸಭೆಗಳು ಪುನಃ ಪುನಃ ನೆನಪು ಮಾಡಬೇಕು "ನಮ್ಮನ್ನು ತನ್ನ ಪ್ರಭಾವದಿಂದಲೂ, ಗುಣಾತಿಶಯದಿಂದಲೂ ಕರೆದ ದೇವರ ವಿಷಯವಾಗಿ ಯೇಸುವಿನ ದಿವ್ಯ ಶಕ್ತಿಯು ನಮಗೆ ಪರಿಜ್ಞಾನವನ್ನು ಕೊಟ್ಟದ್ದರಲ್ಲಿ ಜೀವಕ್ಕೂ ಭಕ್ತಿಗೂ ಬೇಕಾದದ್ದೆಲ್ಲವೂ ದೊರೆಯಿತೆಂದು ಬಲ್ಲೆವಷ್ಟೆ" (1:3).